# ಕರ್ನಾಟಕ ಸರ್ಕಾರದ ನಡವಳಿ

ವಿಷಯ ಬೀದರ್ ಜಿಲ್ಲೆ ಬೀದರ್ ತಾಲೂಕು, ಬಗದಲ್ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಮೊಹ್ಮದ್ ಅಬ್ದುಲ್ಲಾ ಖಾನ್, ಶ್ರೀ ಕಾಮಶೆಟ್ಟಿ ತಂದೆ ಮಾದಪ್ಪಾ ಮತ್ತು ಶ್ರೀಮತಿ ಮೆಹಬೂಬಬಿ ಗಂಡ ಮಹಬೂಬ ಅಲಿ, ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43-ಎ ರನ್ವಯ ಕ್ರಮ ಜರುಗಿಸುವ ಕುರಿತು ಆದೇಶ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018, ದಿನಾಂಕ: 02.02.2019
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್ ಇವರ ಪತ್ರ ಸಂಖ್ಯೆ: ಜಿಪಂಬಿ/ಗ್ರಾ.ಪಂ/ಸಿಆರ್/14/2018-20/252 ದಿನಾಂಕ 13.11.2019
3. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ,ಕಲಬುರಗಿ ರವರ ಪತ್ರ ಸಂಖ್ಯೆ: ಕಂ/ಪ್ರಾಆಕ/ಜಿಪಂ/124/2019-20 ದಿನಾಂಕ 20.01.2020

**ಪುಸ್ತಾವನೆ: -**

ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43 (ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು 48 (4) ಮತ್ತು 48 (5) ರಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಅರೆನ್ಯಾಯಿಕ ಮಾದರಿಯಲ್ಲಿ ವಿಚಾರಣೆ ನಡೆಸುವ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಪ್ರಸ್ತಾವನೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬೀದರ ಜಿಲ್ಲಾ ಪಂಚಾಯಿತಿ, ಬೀದರ್ ರವರು ಬೀದರ್ ಜಿಲ್ಲೆ, ಬೀದರ್ ತಾಲೂಕು, ಬಗದಲ್ ಪಂಚಾಯಿತಿಯ (03) ಜನ ಚುನಾಯಿತ ಪ್ರತಿನಿಧಿಗಳು/ಸದಸ್ಯರುಗಳು ಹಣಕಾಸಿನ ಅವ್ಯವಹಾರದಲ್ಲಿ ಭಾಗಿಯಾಗಿರುವುದರಿಂದ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ 43 (ಎ) ರನ್ವಯ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರು, ಕಲ್ಬುರ್ಗಿ ವಿಭಾಗರವರನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲ್ಬುರ್ಗಿ ವಿಭಾಗ, ಕಲ್ಬುರ್ಗಿ ಇವರು ಮೇಲಿನ ಪ್ರಕರಣದ ಪೂರ್ಣ ಪ್ರಮಾಣದ ವಿಚಾರಣೆಯನ್ನು ನಡಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

**ಪ್ರಕರಣದ ವಿವರ:-** ಈ ಪ್ರಕರಣದಲ್ಲಿ ಬಗದಲ್ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಮೊಹ್ಮದ ಅಬ್ದುಲ್ಲಾ ಖಾನ್ ತಂದೆ ನೂರುಲ್ಲಾಖಾನ್ ರವರು, ಗ್ರಾಮ ಪಂಚಾಯಿತಿ ಸದಸ್ಯರ ಸ್ಥಾನದ ಜೊತೆಗೆ ಅಮಾನತ್ ಅಲ್ಪಸಂಖ್ಯಾತರ (ಕೃಷಿಯೇತರ ಪತ್ತಿನ) ಸಹಕಾರ ಸಂಘದ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿರುವರು ಅಂದರೆ ಲಾಭದಾಯಕ ಹುದ್ದೆ ಅಲಂಕರಿಸಿರುತ್ತಾರೆಂದು ಹಾಗೂ ಮತ್ತಿಬ್ಬರು ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಕಾಮಶೆಟ್ಟಿ ತಂದೆ ಮಾದಪ್ಪಾ ಮತ್ತು ಶ್ರೀಮತಿ ಮಹಬೂಬಿ ಗಂಡ ಮಹಬೂಬ ಅಲಿ, ಇವರು 2016-17ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಸಂಬಂಧಿಕರಿಗೆ ಮನೆ ಮಂಜೂರು ಮಾಡಿರುತ್ತಾರೆಂದು, ಸದರಿಯವರ ಗ್ರಾಮ ಪಂಚಾಯಿತಿ ಸದಸ್ಯತ್ವ ರದ್ದು ಪಡಿಸುವ ಕುರಿತು ದಿನಾಂಕ: 04.12.2019 ರಂದು ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿತ್ತು. ನಂತರ ವಿಚಾರಣೆ ದಿನಾಂಕದಂದು ಕಛೇರಿಗೆ ಖುದ್ದಾಗಿ ಹಾಜರಾಗಿ, ಪ್ರಾದೇಶಿಕ ಆಯುಕ್ತರ ಸಮಕ್ಷಮದಲ್ಲಿ ಸಂಬಂಧಪಟ್ಟ ಎಲ್ಲಾ ಸಮರ್ಥನೀಯ ಅಗತ್ಯ ದಾಖಲೆ ಹಾಗೂ ಲಿಖಿತ ಹೇಳಿಕೆಯೊಂದಿಗೆ ತಪ್ಪದೇ ಹಾಜರಾಗುವಂತೆ ದಿನಾಂಕ:04.12.2019 ರಂದು ವಿಚಾರಣಾ ನೋಟೀಸು ಜಾರಿ ಮಾಡಲಾಗಿತ್ತು. ಈ ಪ್ರಕರಣದ ವಿಚಾರಣೆಯನ್ನು ದಿನಾಂಕ: 16.12.2019 ಮತ್ತು

13.01.2020 ರಂದು ಜರುಗಿಸಲಾಗಿದೆ. ದಿನಾಂಕ: 16.12.2019 ರಂದು ಜರುಗಿದ ವಿಚಾರಣೆಯ ದಿನದಂದು ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಮೊಹ್ಮದ್ ಅಬ್ದುಲ್ಲಾ ಖಾನ್ ತಂದೆ ನೂರುಲ್ಲಾಖಾನ್, ಇವರು ಗೈರು ಹಾಜರಾಗಿರುತ್ತಾರೆ. ನಂತರದ ವಿಚಾರಣೆ ದಿನಾಂಕ: 13.01.2020ರಂದು ಜರುಗಿದ್ದು ಮೂರೂ ಜನ ಗ್ರಾಮ ಪಂಚಾಯಿತಿ ಸದಸ್ಯರುಗಳು ಹಾಜರಾಗಿರುತ್ತಾರೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬೀದರ್, ಇವರ ಪರವಾಗಿ ಸಹಾಯಕ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯಿತಿ, ಬೀದರ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಬೀದರ್ ಮತ್ತು ತಾಲ್ಲೂಕು ಪಂಚಾಯಿತಿ ಕಛೇರಿಯ ಸಿಬ್ಬಂದಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬಗದಲ್ ಗ್ರಾಮ ಪಂಚಾಯಿತಿ, ಇವರುಗಳು ವಿಚಾರಣೆಗೆ ಹಾಜರಾಗಿ ಅವರವರ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ.

ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲ್ಬುರ್ಗಿ ವಿಭಾಗ, ಕಲ್ಬುರ್ಗಿ ಇವರು ಮೇಲಿನ ಪ್ರಕರಣದ ವಿಚಾರಣಾ ವರದಿಯಲ್ಲಿ ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

1) ಶ್ರೀ ಮೊಹ್ಮದ್ ಅಬ್ದುಲ್ಲಾ ಖಾನ್ ತಂದೆ ನೂರುಲ್ಲಾ ಖಾನ್ ಇವರು ಬಗದಲ್ ಗ್ರಾಮ ಪಂಚಾಯಿತಿ ಸದಸ್ಯರಾಗಿರುವುದಕ್ಕಿಂತ ಮುಂಚೆಯೇ ಅಂದರೆ ದಿನಾಂಕ:01.04.2015 ರಂದು ಅಮಾನತ್ ಅಲ್ಪಸಂಖ್ಯಾತರ. ಪತ್ತಿನ ಸಹಕಾರ ಸಂಘ ನಿಯಮಿತ, ಬಗದಲ್, ಬೀದರ್ ತಾಲ್ಲೂಕು, ಬೀದರ ಜಿಲ್ಲೆ ಈ ಸಂಸ್ಥೆಯ ಖಜಾಂಚಿ ಹುದ್ದೆಗೆ ರಾಜೀನಾಮೆ ನೀಡಿ ಬಿಡುಗಡೆ ಹೊಂದಿ ನಂತರ ದಿನಾಂಕ:05.06.2015 ರಂದು ಗ್ರಾಮ ಪಂಚಾಯಿತಿ ಸದಸ್ಯನಾಗಿ ಆಯ್ಕೆಯಾಗಿರುವುದು ಕಂಡು ಬಂದಿರುತ್ತದೆ.

2) ಶ್ರೀಮತಿ ಮೆಹಬೂಬಿ ಗಂಡ ಮೆಹಬೂಬ ಆಲಿ, ಸದಸ್ಯರು, ಇವರು ತಮ್ಮ ಸೊಸೆಯಾದ ಶ್ರೀಮತಿ ಶಾಹೀನ್ ಬೇಗಂ ಗಂಡ ಎಂ.ಡಿ.ಯಾಕೂಬ್ ಆಲಿ, ಇವರ ಹೆಸರಿನಲ್ಲಿ 2016-17ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮನೆ ಮಂಜೂರಾಗಿರುವುದು ಕಂಡು ಬರುತ್ತದೆ.

3) ಶ್ರೀ ಕಾಮಶೆಟ್ಟಿ ತಂದೆ ಮಾದಪ್ಪಾ ರವರು ತಮ್ಮ ತಾಯಿಯವರಾದ ಶ್ರೀಮತಿ ಪದ್ಮಾವತಿ ಗಂಡ ಮಾದಪ್ಪಾ ಇವರ ಹೆಸರಿನಲ್ಲಿ 2016-17ನೇ ಸಾಲಿನಲ್ಲಿ ಮನೆ ಮಂಜೂರಾಗಿರುವುದು ಕಂಡು ಬಂದಿರುತ್ತದೆ. ಆದರೆ, ಶ್ರೀಮತಿ ಪದ್ಮಾವತಿ ಗಂಡ ಮಾದಪ್ಪ ಇವರ ಹೆಸರಿಗೆ ಮನೆ ಮಂಜೂರಾಗಿರುವುದಕ್ಕೆ ಯಾವುದೇ ಕಂತಿನ ಹಣವನ್ನು ರಾಜೀವ್ ಗಾಂಧಿ, ವಸತಿ ನಿಗಮದಿಂದ ಬಿಡುಗಡೆಯಾಗಿರುವುದು ಕಂಡುಬಂದಿರುವುದಿಲ್ಲ.

ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ವಸತಿ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆಯಬಹುದೇ ಎಂಬುದರ ಬಗ್ಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ಇವರು ಪತ್ರ ಸಂಖ್ಯೆ: MDRGRHCL/01/GEN/69/2002/19221, ದಿನಾಂಕ.09.10.2013ರಲ್ಲಿ ನೀಡಿರುವ ಸ್ಪಷ್ಟೀಕರಣದಲ್ಲಿ ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರು/ಅಧ್ಯಕ್ಷರು/ಉಪಾಧ್ಯಕ್ಷರು ಅವರ ಪತಿ/ಪತ್ನಿ ಅಥವಾ ಕುಟುಂಬದ ಸದಸ್ಯರು ವಸತಿ ಯೋಜನೆಗಳಡಿ ಮನೆ/ನಿವೇಶನ ಸೌಲಭ್ಯವನ್ನು ಪಡೆಯಬಹುದಾಗಿದೆ ಎಂದು ತಿಳಿಸಿರುವುದರಿಂದ ಸದರಿ ಗ್ರಾಮ ಪಂಚಾಯಿತಿ ಸದಸ್ಯರುಗಳ ಮೇಲಿನ ಆರೋಪಗಳು ಸಾಬೀತಾಗದೇ ಇರುವುದು ಕಂಡುಬರುತ್ತದೆ ಎಂದು ಪ್ರಾದೇಶಿಕ ಆಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಪ್ರಾದೇಶಿಕ ಆಯುಕ್ತರ ವಿಚಾರಣಾ ವರದಿ ಹಾಗೂ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಪ್ರಕರಣದಲ್ಲಿನ ಆಪಾದಿತ ಗ್ರಾಮ ಪಂಚಾಯತಿ ಸದಸ್ಯರುಗಳ ಮೇಲಿನ ಆರೋಪಗಳಿಂದ ದೋಷಮುಕ್ತಗೊಳಿಸಲು ತೀರ್ಮಾನಿಸಿದೆ.

ಅದರಂತೆ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 148 ಜಿಪಿಎಸ್ 2020 ಬೆಂಗಳೂರು, ದಿನಾಂಕ:29.09.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಕಾರಣರೆನ್ನಲಾದ ಆಪಾದಿತ ಜನಪ್ರತಿನಿಧಿಗಳಾದ ಶ್ರೀ ಮಹ್ಮದ್ ಅಬ್ದುಲ್ಲಾ ಖಾನ್ ತಂದೆ ನೂರುಲ್ಲಾ ಖಾನ್ ಮತ್ತು ಶ್ರೀ ಕಾಮಶೆಟ್ಟಿ ತಂದೆ ಮಾದಪ್ಪ, ಹಾಗೂ ಶ್ರೀಮತಿ ಮೆಹಬೂಬಿ ಗಂಡ ಮೆಹಬೂಬಅಲಿ, ಸದಸ್ಯರು, ಬದಗಲ್ ಗ್ರಾಮ ಪಂಚಾಯಿತಿ, ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ರವರುಗಳ ವಿರುದ್ಧದ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Chetna
(ಚೇತನ.ಎಂ) 29/9/21
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
29/9/21

ಇವರಿಗೆ,

1) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
2) ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ, ಬೀದರ್.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್.
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬೀದರ್ ತಾಲೂಕು, ಬೀದರ್ ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಗದಲ್ ಗ್ರಾಮ ಪಂಚಾಯತಿ, ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ.
6) ಸಂಬಂಧಪಟ್ಟ ಸದಸ್ಯರುಗಳಿಗೆ **(ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಗದಲ್ ಗ್ರಾಮ ಪಂಚಾಯತಿ, ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ಇವರ ಮುಖಾಂತರ)**
7) ಗಣಕ ಕೋಶ, ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ / ಹೆಚ್ಚುವರಿ ಪತಿ.